ಉದ್ಭವಃ

UDHBHAVAHA

# Savi Nenapugalu

## 2021 - 2022

## ಈ ಸಾಲು ಭರವಸೆಯದ್ದು...

ಬಿರುಗಾಳಿಯಂತೆ ಇಡೀ ಪ್ರಪಂಚವನ್ನು ಆಕ್ರಮಿಸಿದ ಕೋವಿಡ್ ನಿಂದ ಹೊರಬರುವ ಭರವಸೆ. ಈ ವರ್ಷವು ಕೆಲವು ಏರಿಳಿತಿಗಳು, ಲಾಕ್ ಡೌನಿನ ಅನಿಶ್ಚಿತತೆಗಳು, ಪುನಃ ಕಾಂಪಸ್ನಲ್ಲಿ ಒಟ್ಟಿಗೆ ಸೇರುವ ಖುಷಿ, ಮುಂಬರುವ ವರ್ಷದ ಚಟುವಟಿಕೆಗಳ ಕಾತುರತೆಯಲ್ಲಿ ಹಾಗೂ ಸಮುದಾಯವು ಬಲಗೊಳ್ಳುವುದರಲ್ಲಿ ಕಳೆಯಿತು.

**ಮುಖ್ಯಾಂಶಗಳು**

**3 ಜೂನ್** - ಸರ್ಕಾರ ವಿಧಿಸಿದ ಲಾಕ್ ಡೌನ್ ನೊಂದಿಗೆ, ಪ್ರತಿ ವಾರ ವಿಷಯಗಳೊಂದಿಗೆ ಸಂಧಿಸುತ್ತಾ, ಪರಸ್ಪರ ಹುರಿದುಂಬಿಸುತ್ತಾ ಈ ಶೈಕ್ಷಣಿಕ ವರ್ಷವನ್ನು ಪ್ರಾರಂಭಿಸಿದೆವು.

**ಸೆಪ್ಟೆಂಬರ್ -** ನಾವು ನಮ್ಮ ನಿಯಮಿತ 5-ದಿನದ ಲಯವನ್ನು ಪುನರಾರಂಭಿಸಿದೆವು. ಮಕ್ಕಳು, ಪಾಲಕರು ಮತ್ತು ಶಿಕ್ಷಕರಿಗೆ ಭೌತಿಕ ಜಾಗದಲ್ಲಿ ಮತ್ತೆ ಕಾರ್ಯಗೈಯಲು ಸಂತೋಷವಾಯಿತು.

**ಆರೋಗ್ಯ ಏಸ್ತೆಟಿಕ್ಸ್** ಮತ್ತು **ಅಕಾಡೆಮಿಕ್ಸ್** ಶಾಖೆಗಳು ಪುನಃ ಪೂರ್ಣಪ್ರಮಾಣದಲ್ಲಿ ಆರಂಭವಾಯಿತು.

ದೊಡ್ಡ ಮಕ್ಕಳಿಗೆ **ಆಯುರ್ವೇದ** ಪರಿಚಯಿಸಲಾಯಿತು.

ಆಡಳಿತಾತ್ಮಕ ಚಟುವಟಿಕೆಗಳು, ಶೈಕ್ಷಣಿಕ ಸಂಶೋಧನೆ, ಸಾಂಸ್ಕೃತಿಕ ಬಲವರ್ಧನೆ, ನಿಧಿ ಸಂಗ್ರಹಣೆ, ಸಣ್ಣ ಪ್ರಮಾಣದ ವ್ಯಾಪಾರ ಮತ್ತು ಔಟ್ರೀಚ್ ಕಾರ್ಯಕ್ರಮಗಳು ಒಳಗೊಂಡಂತೆ ವಿವಿಧ ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಮತ್ತು ಸುಗಮ ಕಾರ್ಯನಿರ್ವಹಣೆಯನ್ನು ನಡೆಸಲು ಪಾಲಕರು ಮತ್ತು ಶಿಕ್ಷಕರು ಒಟ್ಟಾಗಿ 6 **ರೆಸ್ಪಾಂಸಿಬಿಲಿಟಿ ಗುಂಪುಗಳನ್ನು** ರಚಿಸಿದರು.

ಗೌರಿಬಿದನೂರಿನಲ್ಲಿ ಭತ್ತದ ಬಿತ್ತನೆ ಮತ್ತು ಅದರ ಸಂಪೂರ್ಣ ಜೀವನ ಚಕ್ರ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸಿದರು.

ಗೋಪುರ ಗುಂಪು (10 ರಿಂದ 13 ವರ್ಷ ವಯಸ್ಸಿನವರು) ಸ್ಟ್ರೀಮ್ ಟ್ರೇಸಿಂಗ್ ಗಾಗಿ ಪಶ್ಚಿಮ ಘಟ್ಟಗಳಿಗೆ ಭೇಟಿ ನೀಡಿದರು ಮತ್ತು ಅದರೊಂದಿಗೆ ಬಂದ ಸಾಹಸಗಳನ್ನು ಆನಂದಿಸಿದರು.

ಮಕ್ಕಳು ಉತ್ತರಹಳ್ಳಿ ರಸ್ತೆಯಲ್ಲಿರುವ ಸಾವನ್ ದರ್ಬಾರ್ ಆಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ನೈಸರ್ಗಿಕ ಬೆಲ್ಲ ತಯಾರಿಕೆಯ ಅನುಭವ ಪಡೆದರು.

**ಮಂಥನ್**, ಪೋಷಕರೊಂದಿಗೆ ನಮ್ಮ ಮಾಸಿಕ ಭೇಟಿಗಳಲ್ಲಿ ಆಧುನಿಕತೆ ಮತ್ತು ಶಿಕ್ಷಣ ಹಾಗೂ ನಮ್ಮ ಜೀವನದ ಮೇಲೆ ಅದರ ಪ್ರಭಾವ, ಸಮುದಾಯದ ಮೂಲತತ್ವ ಮತ್ತು ಸಮುದಾಯದ ಭಾಗವಾಗಲು ಅಗತ್ಯವಾದ ಆಲೋಚನಾ ಪ್ರಕ್ರಿಯೆ, ಒಬ್ಬರ ಜೀವನದಲ್ಲಿ ಶಿಕ್ಷಣ ವಹಿಸುವ ಪಾತ್ರ - ಇವುಗಳ ಕುರಿತು ಚಿಂತನೆಗೆ ಪ್ರಚೋದಿಸುವ ಚರ್ಚೆಗಳನ್ನು ತಂದರು.

ನಾವು ಈ ವರ್ಷ ಸುಮಾರು 5 **ಪರಿಚಯ** ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು, ಅಲ್ಲಿ ನಾವು ಹೊರಗಿನವರಿಗೆ ಉದ್ಭವಃಹದ ಆಗುಹೋಗುಗಳ ಬಗ್ಗೆ ಪರಿಚಯಿಸಿದೆವು, ಅವರಲ್ಲಿ ಕೆಲವರು ಈಗ ಪೋಷಕರು ಅಥವಾ ಶಿಕ್ಷಕರಾಗಿ ಸಮುದಾಯದ ಭಾಗವಾಗಿದ್ದಾರೆ.

ಹೆಸರಾಂತ ಗಣಿತಶಾಸ್ತ್ರಜ್ಞ ಮತ್ತು ಶಿಕ್ಷಣತಜ್ಞರು ಆಗಿರುವ **ಪ್ರೊ.ಸಿ.ಕೆ. ರಾಜು** ಅವರು ಗಣಿತ ಮತ್ತು ವಿಜ್ಞಾನದ ವಿಧಾನದ ಮೇಲೆ ಪಾಶ್ಚಿಮಾತ್ಯ ಪ್ರಭಾವದ ಬಗ್ಗೆ ಮಾತನಾಡಿದರು ಮತ್ತು ಶಾಲಾ/ಕಾಲೇಜು ಪಠ್ಯಪುಸ್ತಕಗಳಲ್ಲಿ ಎದ್ದುಕಾಣುವ ವೈಪರೀತ್ಯಗಳನ್ನೂ ತಿಳಿಸಿದರು. ಅವರು ಈ ವಿಷಯದ ಕುರಿತು ನಮ್ಮ ಸಮುದಾಯ ಮತ್ತು ಇತರರನ್ನು ಉದ್ದೇಶಿಸಿ ಮಾತನಾಡಿದ್ದು ನಮ್ಮ ಸೌಭಾಗ್ಯವೇ ಸರಿ.

ಮಸ್ಸೂರಿಯಲ್ಲಿ SIDH ನ ಪವನ್‌ಜಿ ಆಯೋಜಿಸಿದ್ದ **ಚಿಂತನ್ ಕಾರ್ಯಾಗಾರ 'ಸಾರ್ಥಕ್ ಜೀವನ್'**ನಲ್ಲಿ ಶಿಕ್ಷಕರು ಭಾಗವಹಿಸಿದರು, ಅಲ್ಲಿ ಆಧುನಿಕತೆ ಮತ್ತು ಸೌಂದರ್ಯದ ಸುತ್ತಲಿನ ವಿಷಯಗಳ ಬಗ್ಗೆ ಚಿಂತನೆ-ಚರ್ಚೆ ಮಾಡಲಾಯಿತು.




**ಆಲೆ ಮನೆ**



**ಮಂಥನ**



**ಸಿದ್ಧ, ಮಸೂರಿಯಲ್ಲಿ ನಡೆದ ಚಿಂತನ ಶಿಬಿರ**





**ಪೈರ್ ನಡುವುದು**

## ಹಬ್ಬ ಹಬ್ಬ..

**ವರಮಹಾಲಕ್ಷ್ಮಿ ಹಬ್ಬದ** ಪ್ರಯುಕ್ತ ಉದ್ಭವಃದಲ್ಲಿ ಪುಟ್ಟ ಮಕ್ಕಳಿಂದ ಒಂದು ಚಿಕ್ಕ ಪೂಜೆ ನಡೆಯಿತು.





**ವರಮಹಾಲಕ್ಷ್ಮಿ ಪೂಜೆ**

**ಶ್ರೀಕೃಷ್ಣ ಜನ್ಮಾಷ್ಟಮಿಯು** ಕೃಷ್ಣನಿಗೆ ಅಭಿಷೇಕ ನಂತರ ತೊಟ್ಟಿಲು ಸೇವೆಯ ಮೂಲಕ ಆಚರಿಸಲಾಯಿತು. ವಿವಿಧ ಬಗೆಯ ಮೊಸರು ಮಡಿಕೆ (ದಹಿ ಹಂಡಿ) ಆಟಗಳು ಸಹ ಆಚರಣೆಯ ಭಾಗವಾಗಿದ್ದವು.



**ತೊಟ್ಟಿಲು ತೂಗುವುದು**

**ಬೆಣ್ಣೇ ಕಡಿಯುವುದು**



**ಗಣೇಶ ಚತುರ್ಥಿ** ಆಚರಣೆ ವೇಳೆ ಉದ್ಭವಃದ ಮಕ್ಕಳು ಜೇಡಿ ಮಣ್ಣಿಂದ ತಯಾರಿಸಿದ್ದ ಗಣೇಶನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು.ಪೂಜೆಯ ನಂತರ, ಮೂರ್ತಿಗಳನ್ನು ಮೆರವಣಿಗೆಯಲ್ಲಿ ಕರೆದೊಯ್ದು ನಮ್ಮ ಹೋಲಿ ಹೊಂಡದಲ್ಲಿ ವಿಸರ್ಜನೆ ಮಾಡಲಾಯಿತು.



**ಗಣೇಶ ಹಬ್ಬ**



**ವಿಸರ್ಜನೆ**

**ಗೀತಾಜಯಂತಿಯ** ಅಂಗವಾಗಿ ಪೋಷಕರೂ ಶಿಕ್ಷಕರೂ ಒಗ್ಗೂಡಿ ಭಗವದ್ಗೀತೆಯ ಎಲ್ಲಾ 18 ಅಧ್ಯಾಯಗಳನ್ನು ಪಠಿಸಿ ಶ್ರೀ ಕೆ. ಎಸ್.ನಾರಾಯಣಾಚಾಯರಿಗೆ ಅರ್ಪಿಸಿದರು. ಹತ್ತಿರದ ಶ್ರೀನಿವಾಸನ ಗುಡಿಗೆ ಸಹ ಹೋದೆವು, ಅಲ್ಲಿ ಮಕ್ಕಳು ತಾವು ಕಲಿತ ಗೀತೆಯ ಅಧ್ಯಾಯಗಳನ್ನು ದೇವರಿಗೆ ಅರ್ಪಿಸಿದರು.





**ಗೀತ ಜಯಂತಿ**

ಕಲಾ ಸಂಧ್ಯಾದ ಅಂಗವಾಗಿ **ದಸರಾ** ಹಾಗೂ **ದೀಪಾವಳಿಯ** ಆಚರಣೆಗೆ ಸರಸ್ವತಿ ಪೂಜೆ ಮತ್ತು ಲಕ್ಷ್ಮಿ ಪೂಜೆ ಮಾಡಲಾಯಿತು.



**ಸರಸ್ವತಿ ಹಾಗೂ ಲಕ್ಷ್ಮೀ ಪೂಜೆ**

**ಗೊಂಬೆ**



ಉದ್ಭವಃದ ವಾರ್ಷಿಕ ಹಬ್ಬವಾದ **ಸಂಕ್ರಾಂತಿ** ಹಬ್ಬವನ್ನು ಕೋವಿಡ್ ಲಾಕ್‌ಡೌನ್‌ನ ಹೆಚ್ಚುತ್ತಿದ್ದ ಅನಿಶ್ಚಿತತೆಯ ಮಧ್ಯೆಯೂ ಬಹಳ ಉತ್ಸಾಹದಿಂದ ಆಚರಿಸಲಾಯಿತು. ಗೌರಿಬಿದನೂರಿನಲ್ಲಿ ಸುಗ್ಗಿ ಹಬ್ಬಕ್ಕೆ ರಾಶಿ ಪೂಜೆ, ಗೋಪೂಜೆ ಮಾಡಿ, ಸೂರ್ಯನಿಗೆ ಅರ್ಘ್ಯ ನೀಡಿದೆವು. ಸುಗ್ಗಿಯ ರಾಶಿಯ ಸುತ್ತ 'ಸುಗ್ಗಿ ಕಾಲ ಹಿಗ್ಗಿ ಬಂದಿತು' ಹಾಡಿಗೆ ಮಕ್ಕಳು ಮತ್ತು ಶಿಕ್ಷಕರು ಹೆಜ್ಜೆ ಹಾಕಿದರು. ಅಲ್ಲದೆ ಜನಪದ ಸಂಗೀತ ಕಲಾವಿದರಿಂದಲೂ ಕಾರ್ಯಕ್ರಮ ನಡೆಯಿತು.





**ಮರಳಿಮಣ್ಣಿಗೆ ತೋಟದಲ್ಲಿ ಸಂಕ್ರಾಂತಿ ಹಬ್ಬದ ಆಚರಣೆ**

**ಜನಪದ ಸಂಗೀತ**





ರಾಶಿ ಪೂಜೆ



ಕುಂಬಾರಿಕೆ



ಪೊಂಗಲ್ ಓ ಪೊಂಗಲ್

ಬಿಸಿ ಬಿಸಿ ಊಟ



**ಮಹಾಶಿವರಾತ್ರಿಯ** ಪ್ರಯುಕ್ತ ನಾವು ಶಾಲೆಯಲ್ಲಿ ಸಣ್ಣ ಪೂಜೆ ಮಾಡಿದ ನಂತರ ಹತ್ತಿರದ ಶಿವನ ದೇವಸ್ಥಾನಕ್ಕೆ ತೆರಳಿದೆವು. ಅಲ್ಲಿ ಮಕ್ಕಳು ಶ್ಲೋಕಗಳನ್ನು ಪಠಿಸಿ ಅವರು ಕಲಿತಿದ್ದ ಭಜನೆಗಳನ್ನು ಹಾಡಿದರು.



**ಮಹಾಶಿವರಾತ್ರಿ ಪೂಜೆ**

**ಹೋಲಿ ಹಬ್ಬದ** ಆಚರಣೆಯು ಹಳದಿ ಕುಂಕುಮ ಮತ್ತು ಬೀಟ್ರೂಟ್ ಗಳಿಂದ ನೈಸರ್ಗಿಕ ಬಣ್ಣಗಳನ್ನು ತಯಾರಿಸುವುದರೊಂದಿಗೆ ಪ್ರಾರಂಭವಾಯಿತು. ಈ ಬಣ್ಣಗಳೊಂದಿಗೆ ಆಡುತ್ತಾ ಹೋಲಿ ಹೊಂಡದಲ್ಲಿ ಆಚರಣೆ ಮುಂದುವರೆಯಿತು



**ಹೊಂಡದಲ್ಲಿ ಹೋಲಿ**



**ಕಾಮಣ್ಣನ ದಹನ**





ನೀವು ಕೆಂಡದ ಮೇಲೆ ನಡೆಯ ಬಹುದೆ?

ಉದ್ಭವಃ
UDHBHAVAHA

**ರಾಮನವಮಿ** ಆಚರಿಸಲೆಂದು ರಾಮೋಹಳ್ಳಿಯ ರಾಮನ ಗುಡಿಗೆ ಹೋದೆವು. ಗೋಪುರ-ಳ ವಿಭಾಗದ ಮಕ್ಕಳು ತಾವು ಕಲಿತ ಮೂಲ ಸಂಕ್ಷೇಪ ರಾಮಾಯಣವನ್ನು ಪಠಿಸಿ ರಾಮನಿಗೆ ಅರ್ಪಿಸಿದರು. ಒಂದು ರೀತಿಯಲ್ಲಿ ಇದು ಸಂಸ್ಕೃತ ಶಿಕ್ಷಕರಾದ ಹರೀಶಣ್ಣ ಮಕ್ಕಳ ಕಲಿಕೆಯನ್ನು ಪರೀಕ್ಷಿಸಿದಂತೆಯೂ ಆಯಿತು.

**ಬೆಳೆಯುತ್ತಿರುವ ಕುಟುಂಬ...**

1. 2021-22 ರಲ್ಲಿ, ಉದ್ಭವಃ 45 ಮಕ್ಕಳು ಮತ್ತು 33 ಕುಟುಂಬಗಳಿಗೆ ಬೆಳೆಯಿತು.

2. ಅರ್ಚನಾ ಅಕ್ಕ ಸ್ತಂಭ ಗುಂಪಿನ (6 ರಿಂದ 8 ವರ್ಷ ವಯಸ್ಸಿನವರು) ಶಿಕ್ಷಕಿಯಾಗಿ ಸೇರಿಕೊಂಡರು. ಮಂಡ್ಯ ಜಿಲ್ಲೆಯ ಸಂತೆಕಸಲಗೆರೆ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಇವರು ಇತಿಹಾಸ ಮತ್ತು ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಅದಕ್ಕೂ ಮೊದಲು ಬಿ.ಎಡ್ ಮುಗಿಸಿರುವರು. ನೀವು ಅರ್ಚನಾ ಅಕ್ಕರನ್ನು ಭೇಟಿಯಾದಾಗ, ಅವರು ಸರಳ ಹಾಗೂ ಸಾಧಾರಣ ವ್ಯಕ್ತಿಯಂತೆ ತೋರಬಹುದು, ಆದರೆ ವಾಸ್ತವದಲ್ಲಿ ಅವರು ಅಚ್ಚರಿಗಳ ಆಗರ! ಅವರು ಜಾನಪದ ಕಲೆಗಳ ಖಜಾನೆ - ಸುಂದರವಾಗಿ ಹಾಡುತ್ತಾರೆ, ಸಾಂಪ್ರದಾಯಿಕ "ಕೋಲಾಟ" ಕಲಿಸಬಲ್ಲರು ಮತ್ತು ಬುಗುರಿ ಆಡಿಸುವುದರಲ್ಲಿ ನಿಪುಣರು. ಉದ್ಭವಃದಲ್ಲಿ ಸುದ್ದಿ ಏನೆಂದರೆ, ಅರ್ಚನಾ ಅಕ್ಕನಿಂದ ನಾವು ಪ್ರತಿದಿನ ಹೊಸದೊಂದನ್ನು ಕಲಿಯುತ್ತೇವೆ ಎಂದು!

3.ಲಿಖಿತಾ ಅಕ್ಕ ಶ್ರೀ ಸಂತೋಷ್ ಅವರೊಂದಿಗಿನ ವಿವಾಹದ ಮೂಲಕ ತಮ್ಮ ಜೀವನದ ಹೊಸ ಹಂತಕ್ಕೆ ಕಾಲಿಟ್ಟರು.



ಆರತಕ್ಷತೆಯ ಸಂಭ್ರಮ

UDHBHAVAHA

4.ನಮ್ಮ ಎರಡು ಕುಟುಂಬಗಳಲ್ಲಿ ನವ ಶಿಶುಗಳ ಆಗಮನವಾಯಿತು. ಖುಷಿ ಮತ್ತು ಸಿಂಚನಾ ಅವರವರ ಮನೆಗಳಲ್ಲಿ ಒಬ್ಬ ಪುಟ್ಟ ತಮ್ಮನನ್ನು ಸ್ವಾಗತಿಸಿದರು.

# ದುರದೃಷ್ಟವಶಾತ್...

**1.** ನಮ್ಮ ಆತ್ಮೀಯ ಪೋಷಕರಲ್ಲಿ ಒಬ್ಬರಾದ ಮನಸ್ವಿ ಮತ್ತು ಸಾಂಚಿ ಅವರ ತಾಯಿ, ರಘುನಂದನ್ ಅಣ್ಣನ ಹೆಂಡತಿ **ಪಲ್ಲವಿ ಅಕ್ಕನ**ನ್ನು ಕಳೆದುಕೊಂಡಾಗ ಅದು ಉದ್ಭವಃದ ಅತ್ಯಂತ ದುಃಖಕರ ದಿನವಾಗಿತ್ತು. ಆಕೆಯ ಸುಂದರ ನಗು, ಸದಾ ಬೆಂಬಲಿಸುವ ಸ್ವಭಾವ ಮತ್ತು ಉತ್ಸಾಹವು ನಮ್ಮ ನೆನಪಿನಲ್ಲಿ ಶಾಶ್ವತವಾಗಿ ಉಳಿಯುತ್ತವೆ.

**2.** ಮ್ಮ ಕಾಲದ ಶ್ರೇಷ್ಠ ವಿದ್ವಾಂಸ ಮತ್ತು ತತ್ವಜ್ಞಾನಿ **ಪ್ರೊ.ಕೆ.ಎಸ್.ನಾರಾಯಣಾಚಾರ್ಯರು** ನಮ್ಮನ್ನು ಅಗಲಿದರು. ಈಗ ಉದ್ಭವಃದ  ಅವಿಭಾಜ್ಯ ಅಂಗವಾಗಿರುವ ಅವರ ಅಸಂಖ್ಯಾತ ಪುಸ್ತಕಗಳ ರೂಪದಲ್ಲಿ ಅವರು ನಮ್ಮ ನಡುವೆ ಚಿರಸ್ಮರಣೀಯ. ಅವರ ಚಿಂತನೆಗಳು, ಉಪನ್ಯಾಸಗಳು, ಬರಹಗಳು ನಮಗೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ. ಉದ್ಭವಃ ಆಯೋಜಿಸಿದ್ದ 'ನುಡಿ-ನಮನ' ಕಾರ್ಯಕ್ರಮಕ್ಕೆ ಅವರ ಕುಟುಂಬದವರು, ಸ್ನೇಹಿತರು, ಹಿತೈಷಿಗಳು ಭಾಗವಹಿಸಿ ನಮನ ಸಲ್ಲಿಸಿದರು.

**4**.ಆರ್ಆರ್ ನಗರದ ಅಪಾರ್ಟ್‌ಮೆಂಟ್‌ನಲ್ಲಿ 'ದೃಷ್ಟಿ' ಎಂಬ ಕಾರ್ಯಾಗಾರವು ಪೋಷಕರಿಗಾಗಿ ಜಾಗೃತಿ ಮೂಡಿಸಲು ನಡೆಸಲಾಯಿತು. ಸಿಎಸ್ಆರ್‌ಗಳು, ಎಚ್‌ಎನ್‌ಐಗಳು ಮತ್ತು ಸಮಾಜದ ಇತರ ಜನರು ನಮ್ಮ ಕಾರ್ಯಕ್ಕೆ ಬೆಂಬಲಿಸಲು ಮುಂದೆ ಬಂದರು.





**ನುಡಿ ನಮನ**

3. ಸಾವಿರಾರು ಕಣಜಗಳ ಕುಟುಕುಗಳಿಗೆ ಬಲಿಯಾದ ಕಾರಣ ನಾವು ಅತ್ಯಂತ ಕಿರಿಯ ಕರುವಾದ **ಗುರುದೇವನನ್ನು** ಕಳೆದುಕೊಂಡಿದ್ದು ನೋವಿನ ಸಂಗತಿ . ಈ ಘಟನೆಯ ನಂತರ ಕೆಲವು ಶಿಕ್ಷಕರು ಪೂರ್ಣಪ್ರಜ್ಞಾ ವಿದ್ಯಾಪೀಠಕ್ಕೆ ಭೇಟಿ ನೀಡಿ, ಪ್ರಸ್ತುತ ಉಡುಪಿ ಪೇಜಾವರ ಮಠದ ಮುಖ್ಯಸ್ಥರಾದ ಶ್ರೀ ವಿಶ್ವಪ್ರಸನ್ನ ಸ್ವಾಮಿಗಳನ್ನು ಭೇಟಿ ಮಾಡಿದರು. ಉಡುಪಿ ಸಮೀಪದ ನೀಲಾವರದಲ್ಲಿ ಮಠದ ವತಿಯಿಂದ ನಡೆಯುತ್ತಿರುವ ಗೋಶಾಲೆಗೆ ಉದ್ಭವಃದಿಂದ ರೂ.30,000 ದೇಣಿಗೆ ನೀಡಲಾಯಿತು.




**ಪೂರ್ಣಪ್ರಜ್ಞ ವಿದ್ಯಾಪೀಠಕ್ಕೆ ಹೋಗಿದ್ದು**

# ನಿಧಿ ಸಂಗ್ರಹಣೆ

**1**.ಪಾಲಕರು ಮತ್ತು ಶಿಕ್ಷಕರು ನಿಧಿ ಸಂಗ್ರಹಿಸುವ ಚಟುವಟಿಕೆಯಲ್ಲಿ ಒಗ್ಗೂಡಿ, ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಮಾಡಿದರು.

**2**.ಕೊಯಮತ್ತೂರು ಮತ್ತು ಯುನೈಟೆಡ್ ಸ್ಟೇಟ್ಸ್‌ನಲ್ಲಿನ ಶಾಲೆಗಳು ಮತ್ತು ಗುಂಪುಗಳಿಗೆ ಕಥೆ ಹೇಳುವ ಕಾರ್ಯಕ್ರಮದಲ್ಲಿ ಶಿಕ್ಷಕರು ಭಾಗವಹಿಸಿದರು.

**3**.ಪೋಷಕರು ಡ್ರೀಮ್‌ಕ್ಯಾಚರ್ ತಯಾರಿಕೆ, ಮರದ ಕೆಲಸ ಮತ್ತು ಚಿತ್ರಕಲೆ ಮುಂತಾದ ವಿವಿಧ ಕಾರ್ಯಾಗಾರಗಳನ್ನು ನಡೆಸುವ ಮೂಲಕ ತಮ್ಮ ಕೌಶಲ್ಯಗಳನ್ನು ನಿಧಿ ಸಂಗ್ರಹಣೆಗಾಗಿ ಬೆಂಬಲಿಸಿದರು.







**ನಿಧಿ ಸಂಗ್ರಹಕ್ಕಾಗಿ ಉದ್ಭವಃದಲ್ಲಿ ನಡೆದ ಕೆಲವು ಕಾರ್ಯಕ್ರಮಗಳು**






**ಮರಗೆಲಸ ಕಾರ್ಯಕ್ರಮ**

# ಉದ್ಭವಃದ  ಇನ್ನೂ ಕೆಲವು ದೃಶ್ಯಗಳೂ



ಪವಮಾನ ಹೋಮ

ವಿದ್ಯಾರಂಬ






ಊಟ

# ಉದ್ಭವಃದಲ್ಲಿ ಕಲಿಕೆ



ಇದು ಆಟವಲ್ಲಾ...ಕೆಲಸ!



ಕಾಡಿನ ಪರಿಚಯ



ನಮ್ಮ ಪ್ರೀತಿಯ ಗುರುದೇವ



ಮರ ಹತ್ತೋಣವೆ?

# ಉದ್ಭವಃದಾ ವಾತಾವರಣ



ಅಯ್ಯೋ...ಅಪ್ಪಾ...ಎಷ್ಟು ಬಾರಾ ಇದೆ!



ಶಿಕ್ಷಕರ TT ಆಟ



ಇದು ನಿಜವಾದ ಹಾವಾ?




ಗೀಜಗ ಹಕ್ಕಿಗಳ ಗೂಡು



ಬನ್ನಿ ಅಡಿಗೆ ಮಾಡೋಣ...



ಇವತ್ತು ಊಟಕ್ಕೆ ಮೂಲಂಗಿ ಸಾರೂ!

ಹೀಗೆ ನಮ್ಮ ೬ನೇ ಶೈಕ್ಷಣಿಕ ವರ್ಷವು ತೆರೆ ಕಂಡಿತು. ಈ ಪ್ರಬಲವಾದ ಅಡಿಪಾಯದೊಂದಿಗೆ, ನಾವು ಬೆಳವಣಿಗೆ ಮತ್ತು ಕಲಿಕೆಯ ಮತ್ತೊಂದು ವರ್ಷಕ್ಕೆ ಕಾಲಿಡುತ್ತಿದ್ದಂತೆ, ನಮ್ಮ ಎಲ್ಲಾ ಶಿಕ್ಷಕರು, ಪೋಷಕರು, ಮಾರ್ಗದರ್ಶಕರು ಮತ್ತು ದಾನಿಗಳ ನಿರಂತರ ಬೆಂಬಲಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು.



ಮುಂದಿನ ವರ್ಷ ಮತ್ತೇ ಸಿಗೋಣಾ!